52 (114) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಿಂದ ವಂಚಿತರಾದ ಮಕ್ಕಳ ಸಂಖ್ಯೆ ಎಷ್ಟು (ಪ್ರತ್ಯೇಕ ವಿವರ ಒದಗಿಸುವುದು) ,

ಆ) ರಾಜ್ಯದಲ್ಲಿ ಪ್ರತಿ ಮಗುವಿಗೆ ಕಡ್ಡಾಯ ಶಿಕ್ಷಣ ಕೊಡುವ ಕಾನೂನು ಜಾರಿಯಲ್ಲಿ ಇದೆಯೇ, ಇದ್ದಲ್ಲಿ ಯಾವ ಯಾವ ಕ್ರಮಗಳನ್ನು ಕೈಕೊಳ್ಳಲಾಗಿದೆ ,

ಇ) ರಾಜ್ಯದಲ್ಲಿ ಶೇ 100 ರಷ್ಟು ಮಕ್ಕಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಯಲು ಯಾವ ಕ್ರಮಗಳನ್ನು ಇಲ್ಲಿಯವರೆಗೆ ಕೈಗೊಳ್ಳಲಾಗಿದೆ ,

ಈ) ಇಲ್ಲದಿದ್ದಲ್ಲಿ, ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು ,

ಉ) ಅಲೆಮಾರಿ ಜನಾಂಗದ ಮಕ್ಕಳಿಗೆ ಶಿಕ್ಷಣ ಕೊಡಲು ರಾಜ್ಯದಲ್ಲಿ ಯಾವ ವ್ಯವಸ್ಥೆ ಮಾಡಲಾಗಿದೆ ಮತ್ತು ಎಷ್ಟು ಮಕ್ಕಳು ಶಿಕ್ಷಣದಿಂದ ಹೊರಗುಳಿದಿದ್ದಾರೆ ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಶಿಕ್ಷಣದಿಂದ ವಂಚಿತರಾದ ಒಟ್ಟು ಮಕ್ಕಳ ಸಂಖ್ಯೆ 785 (6 ರಿಂದ 17 ವಯೋಮಾನದ ಮಕ್ಕಳು)

ಆ), ಇ) ಮತ್ತು ಈ) ಹೌದು

ಮಕ್ಕಳಿಗೆ 14 ವಯಸ್ಸಿನವರೆಗೆ ಕಡ್ಡಾಯ ಶಿಕ್ಷಣ ಕೊಡುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು / ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿರುತ್ತದೆ

1 ಚಿಣ್ಣರ ಅಂಗಳ ಕಾರ್ಯಕ್ರಮ
2 ವಿಶೇಷ ದಾಖಲಾತಿ ಆಂದೋಲನ
3 ಗೃಹಾಧಾರಿತ ಶಿಕ್ಷಣ
4 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ
5 4 ತಿಂಗಳ ವಸತಿಯುತ ಸೇತುಬಂಧ ಶಾಲೆ
6 6 ತಿಂಗಳ ವಸತಿಯುತ ಸೇತುಬಂಧ ಶಾಲೆ

7 12 ತಿಂಗಳ ವಸತಿಯುತ ಸೇತುಬಂಧ ಶಾಲೆ

8 ಪೂರಕ ಶಾಲೆ

9 ಟೆಂಟ್ ಶಾಲೆ

10 ಸಂಚಾರಿ ಶಾಲೆ

ಉ) ಅಲೆಮಾರಿ ಜನಾಂಗದ ಮಕ್ಕಳಿಗೆ ಪ್ರತ್ಯೇಕವಾಗಿ ಗಣತಿ ಮಾಡಿರದ ಕಾರಣ ಈ ಮಾಹಿತಿ ಲಭ್ಯವಿರುವುದಿಲ್ಲ ಆದರ ವವಲಸೆ ಎಂಬ ಕಾರಣ ಆಧರಿಸಿ ಮಕ್ಕಳ ಸಮೀಕ್ಷೆ ಮಾಡಿದ್ದು, ಸುಮಾರು 7066 ಮಕ್ಕಳು ವಸಲೆ ಕುಟುಂಬಗಳಲ್ಲಿ ಇರುತ್ತಾರೆ ಎಂದು ತಿಳಿದು ಬಂದಿದೆ ಈ ವಲಸೆ ಬಂದಿರುವ ಮಕ್ಕಳಿಗೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ ಮಕ್ಕಳು ವಸಲೆ ಹೋಗುವುದನ್ನು ತಡೆಗಟ್ಟಲು ಮೂಲ ಹಳ್ಳಿಗಳಲ್ಲಿ 6 ಹಾಗೂ 12 ತಿಂಗಳ ವಸತಿಯುತ ಸೇತುಬಂಧ ಶಾಲೆಗಳನ್ನು ತೆರೆಯಲಾಗಿದೆ

54 (116) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿರುವ ಎಲ್ಲಾ ಶಾಲೆಗಳಿಗೆ ಎಸ್ ಡಿ ಎಮ್ ಸಿ (ಮೇಲುಸ್ತುವಾರಿ) ರಚನೆ ಮಾಡಲು ಇರುವ ನಿಯಮಾವಳಿಗಳೇನು ,

ಆ) ಈ ಹಿಂದೆ ಇದ್ದ ನಿಯಮಾವಳಿಗಳನ್ನು ಬದಲಾವಣೆ ಮಾಡಲು ಕಾರಣಗಳೇನು,

ಇ) ಬದಲಾದ ನಿಯಮಗಳಿಂದ ಹೆಚ್ಚಿನ ಶಾಲೆಗಳಲ್ಲಿ ಗೊಂದಲಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಈ ಎಲ್ಲಾ ತೊಂದರೆಗಳಿಂದ ಶಾಲೆಗಳಲ್ಲಿದ್ದ ಶಿಕ್ಷಕರ ಮೇಲೆ ತೀವ್ರ ಒತ್ತಡ ಬಿದ್ದು ಮಾನಸಿಕ ನೆಮ್ಮದಿ ಕಳೆದುಕೊಂಡು, ಗುಣಮಟ್ಟದ ಶಿಕ್ಷಣ ಕೊಡದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ಹಾಗಿದ್ದರೆ, ಯಾವ ಸುಧಾರಣಾ ಕ್ರಮ ಜರುಗಿಸಲಾಗುವುದು ,

ಉ) ಈ ಹಿಂದೆ ಇದ್ದ ನಿಯಮಗಳನ್ನು ಜಾರಿ ತರಲು ಪರಿಶೀಲಿಸಲಾಗಿದೆಯೇ , ಹಾಗಿದ್ದರೆ, ಯಾವಾಗ ಜಾರಿ ಮಾಡಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಎಸ್ ಡಿ ಎಂ ಸಿ ರಚನೆ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 122 ಪಿಬಿಎಸ್ 2004,